

ಒಮ್ಮೆಗೇ ನೂರಾರು ಉಪಗ್ರಹಗಳನ್ನು ಹಾರಿಸಿ ಬೀಗುವ ನಮಗೆ, ಮಲದ ಗುಂಡಿಯನ್ನು ಸ್ವಚ್ಛ ಮಾಡಬಲ್ಲ ಒಂದೇ ಒಂದು ಸಾಧನವನ್ನು ಕಂಡುಹಿಡಿಯಲು ಆಗುವುದಿಲ್ಲವೇ?

## ಜಾಣ ಪ್ರಶ್ನೋತ್ತರ!

ಈ ಐದು ವರ್ಷಗಳ ಲೋಕಸಭೆ ಸಂಸತ್ ಅಧಿವೇಶನದಲ್ಲಿ ಮಲ ಹೊರುವವರ ಬಗ್ಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮತ್ತು ಕಾರ್ಮಿಕ ಇಲಾಖೆಗೆ ಒಟ್ಟು 13 ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ಸಂಖ್ಯೆ, ಪುನರ್ವಸತಿ ಮತ್ತು ಯಾವಾಗ ಅದನ್ನು ಪೂರ್ಣ ನಿಲ್ಲಿಸಲಾಗುವುದು ಎಂಬ ಬಗ್ಗೆ ಪ್ರಶ್ನೆಗಳಿವೆ. ಆದರೆ ಇದೇ ಐದು ವರ್ಷಗಳ ಅವಧಿಯಲ್ಲಿ ಸಂಸತ್ ಅಧಿವೇಶನದಲ್ಲಿ 'ಸ್ವಚ್ಛ ಭಾರತ ಮಿಶನ್' ಬಗ್ಗೆ ಕೇಳಿದ ಪ್ರಶ್ನೆಗಳು 114 ಮತ್ತು ಕುಡಿಯುವ ನೀರು ಮತ್ತು ನೈರ್ಮಲ್ಯದ ಕುರಿತು ಅದೇ ಸಚಿವಾಲಯಕ್ಕೆ ಕೇಳಿದ ಪ್ರಶ್ನೆಗಳು 56. ಈ ಪ್ರಶ್ನೆಗಳೆಲ್ಲವೂ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕಟ್ಟಿದ ಶೌಚಾಲಯಗಳ ಅಂಕಿಸಂಖ್ಯೆ, ಫಲಾನುಭವಿಗಳಿಗೆ ಕೇಂದ್ರ ಮತ್ತು ರಾಜ್ಯದ ಅಡಿಯಲ್ಲಿ ನೀಡುವ ಪ್ರೋತ್ಸಾಹಧನ, ಇತ್ಯಾದಿಗಳ ಕುರಿತೇ ಇವೆ. ಶೌಚಾಲಯಗಳ ಗುಂಡಿ ತುಂಬಿದ ನಂತರ ಅದನ್ನು ಸ್ವಚ್ಛಪಡಿಸುವವರು ಯಾರು, ಅದಕ್ಕೆ ಏನು ಕಾರ್ಯಯೋಜನೆಗಳಿವೆ ಎಂಬ ಕುರಿತು ಒಂದೇ ಒಂದೇ ಪ್ರಶ್ನೆಯನ್ನು ಕೇಳಿಲ್ಲ.

ಸಹಾಯ ಮಾಡಿದ್ದಕ್ಕೆ ಪರಿಹಾರ ಏನೋ ಬಂತು. ಮುನ್ಸಿಪಾಲ್ಟಿಯವರು ಕಸಹೊಡೆಯುವ ಕೆಲಸ ಕೊಟ್ಟರು. ಗುತ್ತಿಗೆ ಕೆಲಸ. ಒಂದೊಂದು ತಿಂಗಳು ಸಂಬಳ ಕೊಡೋದೆ ತಿಂಗಳ ಕೊನೆಗೆ. ಏನು ಮಾಡದು" – ದಿನಬೆಳಗಾದರೆ ಮಕ್ಕಳಿಗೆ ಏನು ಬೇಯಿಸಿ ಹಾಕುವುದಪ್ಪ ಎಂಬ ಚಿಂತೆ ಶಾಂತಿಗೆ ತಪ್ಪಿದ್ದಲ್ಲ.

ಆ ಕಾಲೊನಿಯಲ್ಲಿ ಇದ್ದವರೆಲ್ಲ 'ತೋಟಿ' ಕೆಲಸ ಮಾಡುವವರು. ಜಾತಿ ವ್ಯವಸ್ಥೆ ಎಲ್ಲಿದೆ ಭಾರತದಲ್ಲಿ ಎನ್ನುವವರು ಒಮ್ಮೆ ಇಂಥಲ್ಲಿ ಬಂದು ಇಣುಕಬೇಕು.

### ಬೆಳ್ಳಿಗೆರೆಗಳ ನಡುವೆ ಕತ್ತಲು

ಶಾಂತಿಯ ಗಂಡ ಸತ್ತು ಏಳು ವರ್ಷವಾಗಿದೆ. ಈ ಏಳುವರ್ಷಗಳಲ್ಲಿ ಭಾರತದ ಸಾಧನೆ ಯಾವ ಕ್ಷೇತ್ರದಲ್ಲಿ ಕಡಿಮೆ ಇದೆ? 2013ರಲ್ಲಿ ಇಸ್ರೋದಿಂದ 'ಮಂಗಳಯಾನ 1' ಯಶಸ್ವಿಯಾಯಿತು. ಕಳೆದ ವರ್ಷ ವಿದೇಶಗಳದ್ದೂ ಸೇರಿದಂತೆ ಒಂದೇ ಬಾರಿಗೆ ಒಟ್ಟು 104 ಉಪಗ್ರಹಗಳನ್ನು ಉಡಾಯಿಸಿ ಇಸ್ರೋ ವಿಶ್ವದಾಖಲೆ ಬರೆದಿದೆ. ಸಾವಿರಾರು ಗಗನಚುಂಬಿ ಕಟ್ಟಡಗಳು ಮಹಾನಗರಗಳಲ್ಲಿ ತಲೆಎತ್ತಿವೆ. ಚಂದ್ರ, ಮಂಗಳನಲ್ಲಿಗೆ ನೌಕೆಗಳನ್ನು ಕಳಿಸಬಲ್ಲ ತಂತ್ರಜ್ಞಾನ, ಸಾಮರ್ಥ್ಯ ಇರುವ ನಮಗೆ ಕೆಲವು ಅಡಿಗಳ ಕೆಳಗೆ ಇರುವ ಮಲದ ಗುಂಡಿಯನ್ನು ಸ್ವಚ್ಛ ಮಾಡಬಲ್ಲ ಒಂದೇ ಒಂದು ಸಾಧನವನ್ನು ಕಂಡುಹಿಡಿಯಲು ಆಗುವುದಿಲ್ಲವೇ? ನಾವು ಕಂಡು ಹಿಡಿಯುವುದು ಬೇಡ, ಬೇರೆ ದೇಶಗಳಲ್ಲಿ ಈಗಾಗಲೇ ಗುಂಡಿ ಸ್ವಚ್ಛಪಡಿಸುವ ಯಂತ್ರಗಳು, ರೊಬೊಗಳನ್ನು ಬಳಸುತ್ತಿದ್ದಾರಲ್ಲ – ಅವುಗಳನ್ನು ತರಿಸಿಕೊಳ್ಳಬಹುದಲ್ಲವೇ? ಯುದ್ಧ ವಿಮಾನಗಳನ್ನು, ಕ್ಷಿಪಣಿಗಳನ್ನು, ಅಣುವಿದ್ಯುತ್ ಉತ್ಪಾದನೆಯ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ನಮಗೆ ಮಲದ ಗುಂಡಿ ಸ್ವಚ್ಛಪಡಿಸುವ ಯಂತ್ರಗಳನ್ನು ಆಮದು ಮಾಡಿಕೊಳ್ಳುವುದು ಸಾಧ್ಯವಿಲ್ಲವೇ? ಸಾಧ್ಯವಿದೆ. ಆದರೆ ನಾಗರಿಕ ಸಮಾಜ ಮತ್ತು ಪ್ರಭುತ್ವಕ್ಕೆ ಬೇಕಿಲ್ಲ. ಇಷ್ಟು ಕಡಿಮೆ ದುಡ್ಡಿಗೆ ಗುಂಡಿಗೆ ಇಳಿದು, ಹೊಲಸು ಬಾಚಲು ದಲಿತರು ಸಿಕ್ಕುವಾಗ ತಂತ್ರಜ್ಞಾನ, ಸಲಕರಣೆಗಳೆಲ್ಲ ಯಾರಿಗೆ ಬೇಕು?


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಕೇವಲ 5 ದಿನದಲ್ಲಿ

100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460